ಎಂ.ವಿ.ಸಿ. ನಂಃ 298/**2025, P.W.-1**

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

ದಿನಾಂಕಃ08.05.2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆ** ಃ ಅರ್ಜಿದಾರರ ಪರ **ವಕೀಲರಿಂದಃ**

ನಾನು ಸ್ಥಳ ಮಹಜರು, ಕರಡು ನಕಾಶೆ, ಸ್ವೊತ್ತು ಸ್ವಾಧೀನತಾ ಮಹಜರು, ಐ ಎಮ್ ವಿ ವರದಿ, ಚಾರ್ಜ ಶೀಟ್‌ನ ಯಥಾನಕಲುಗಳು, ಹೊರರೋಗಿ ಚೀಟಿ, ಅಸೆಸ್ ಮೆಂಟ್ ಫಾರಂ , ಅಂಗನ್ಯೂನತಾ ಪ್ರಮಾಣಪತ್ರ, ಸ್ಕ್ಯಾನಿಂಗ್ ರಿಪೊರ್ಟ್, ಔಷಧ ಚೀಟಿ, ಮೆಡಿಕಲ್ ಬಿಲ್ಲುಗಳು, ಔಷಧ ಚೀಟಿಗಳು, ಸಿಟಿ ಸ್ಕ್ಯಾನ್ ಫಿಲಂ, ಎಕ್ಸರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 20 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲು ಃ 2ನೇ ಎದುರುದಾರರ ಪರಃ ಶ್ರೀಯುತ ಎಂ ಜಿ ಎಸ್ ವಕೀಲರಿಂದಃ

ಅಪಘಾತ ಬಸ್ಸು ಮತ್ತು ಕಾರು ವಾಹನಗಳ ನಡುವೆ ನಡೆದಿದೆ. ನಾನು ಓಮ್ನಿ ಕಾರಿನಲ್ಲಿ ಇದ್ದೆ. ಪೋಲಿಸಿನವರ ತನಿಖೆ ಪ್ರಕಾರ ಅಪಘಾತ ಓಮ್ನಿ ಕಾರಿನ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸಾಕ್ಷಿಯು ಬಸ್ಸು ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ನುಡಿಯುತ್ತಾರೆ. ಕಾರಿನ ಮಾಲೀಕ ಹಾಗೂ ಇನ್ಸುರನ್ಸ ಕಂಪನಿಯನ್ನು ಈ ವ್ಯವಹರಣೆಯಲ್ಲಿಪಕ್ಷಗಾರರನ್ನಾಗಿ ಮಾಡಲು ಆಕ್ಷೇಪ ಇರಲಿಲ್ಲ. ನಾನು ಹೋಗುತ್ತಿದ್ದ ಓಮ್ನಿ ಕಾರಿನ ಚಾಲಕರಿಗೆ ವಾಹನ ಚಲಾಯಿಸಲು ಪರವಾನಗಿ ಇರಲಿಲ್ಲ, ವಾಹನಕ್ಕೆ ವಿಮೆ ಕೂಡಾ ಇರಲ್ಲಿ ಆದ ಕಾರಣ ನಾನು ಓಮ್ನಿ ಕಾರಿನ ಮಾಲೀಕ ಹಾಗೂ ವಿಮಾ ಕಂಪನಿಯನ್ನು ಈ ವ್ಯವಹರಣೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ಕೆವಿಜಿ ಆಸ್ಪತ್ರೆಯಲ್ಲಿ ಒಂದು ದಿನ, ಫಸ್ಟ ನ್ಯೂರೊ ಆಸ್ಪತ್ರೆಯಲ್ಲಿ ಹಾಗೂ ಯನಪೋಯಾ ಆಸ್ಪತ್ರೆಯಲ್ಲಿ 10 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ.

ಅಪಘಾತದಲ್ಲಿ ನನಗೆ ತಲೆಗೆ, ಬೆನ್ನಿಗೆ, ಕಾಲಿಗೆ ಹಾಗೂ ಎದೆಗೆ ಪೆಟ್ಟಾಗಿತ್ತು . ಕಾಲಿನ ಮೂಳೆ ಮುರಿತಾಗಿತ್ತು. ಮುರಿದ ಕಾಲಿಗೆ ಒಳ ಸಾಧನ ಅಳವಡಿಸಿದ್ದಾರೆ. ಅದನ್ನು ಇನ್ನೂ ಕೂಡಾ ತೆಗೆದಿಲ್ಲ. ಸರ್ಜರಿ ನಂತರ ನನ್ನ ಕಾಲಿಗೆ ಫಿಸಿಯೊತೆರಪಿ ಮಾಡುತ್ತಿದ್ದಾರೆ ಅದರ ಸಂಬಂಧ ದಾಖಲೆ ಇಲ್ಲ. ನಿಪಿ 14 ದಾಖಲೆಯನ್ನು ಪರಿಹಾರ ಪಡೆಯುವ ಸಲುವಾಗಿ ಈ ಕೇಸಿನ ಸಲುವಾಗಿಯೆ ಸೃಷ್ಟಿಸಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ.

ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಕೂಲಿ ಕೆಲಸ ಮಾಡಲು ದಿನಕ್ಕೆ ರೂ.110/- ಸಂಬಳ ಕೊಡುತ್ತಾರೆ. ನನ್ನ ಜೊತೆ ಇನ್ನೂ ಕೆಲವು ಜನ ಕೆಲಸ ಮಾಡುತ್ತಾರೆ. ಅಲ್ಲೂ ಕೂಡಾ ದಿನಕ್ಕೆ ರೂ.110/- ಸಂಬಳ ತೆಗೆದುಕೊಳ್ಳುತ್ತಾರೆ. ನನಗೆ ಸಂಬಳ ಕೊಡುವ ಧಣಿ ನನಗೆ ಕೊಡುವ ಸಂಬಳ ದ ಬಗ್ಗೆ ಲೆಕ್ಕ ಬರೆಯುವ ಬಗ್ಗೆ ಗೊತ್ತಿಲ್ಲ. ನಾನು ಹೇಳುವಂತೆ ನಾನು ಮಾಡುವ ಕೂಲಿ ಕೆಲಸದಿಂದ ಕೇವಲ ರೂ.110/- ದೊರಕುವುದಿಲ್ಲ ಅದಕ್ಕೂ ಹೆಚ್ಚು ಸಂಬಳ ನನಗೆ ದೊರಕುತ್ತದೆ ಆದರೂ ಕೂಡಾ ಈ ಕೇಸಿನ ಸಲುವಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು